ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ

ಸಿ.ಸಿ. ನಂಬರಃ **1467/2010**
ಸಿಡಬ್ಲೂಃ **8** ಪಿಡಬ್ಲೂಃ **6**

ಸಾಕ್ಷಿದಾರರ ಹೆಸರು - ಅರ್ಜುನ ಶೆಟ್ಟಪ್ಪ ಬಂಗಾರಿ
ವಯಸ್ಸು - 45 ವರ್ಷ
ಉದ್ಯೋಗ - ಶೇತ್ಕಿ
ಸಾಕೀನ - ಬಿಲಕುಂದಿ

ದಿಃ **24-08-2022** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ ;

ಚಾಸಾ-1 ರವರ ಪರಿಚಯವಿರುವುದಿಲ್ಲ. ಚಾಸಾ-5 ರಿಂದ 7 ಹಾಗೂ 9 ರವರ ಪರಿಚಯ ಇದೆ. ಆರೋಪಿ ನಂ. 6 ಮತ್ತು 7 ರವರ ಪರಿಚಯವಿದೆ. ಆರೋಪಿ ನಂ.1 ರಿಂದ 5, 8 ರಿಂದ 10 ರವರ ಪರಿಚಯವಿರುವುದಿಲ್ಲ. ಈಗ ನಾನು ನೋಡುತ್ತಿರುವ ನೋಂದಣಾಧಿಕಾರಿ ಗೋಕಾಕ ಕಚೇರಿಯಲ್ಲಿ ನೋಂದಣಿಯಾದ ಎರಡು ಖರೀದಿ ಪತ್ರಗಳ ಮೇಲೆ ನನ್ನ ಸಹಿ ಇರುತ್ತದೆ. ಸಾಕ್ಷಿಯು ಸದರಿ ಖರೀದಿ ಪತ್ರಗಳ ಧೃಡೀಕೃತ ನಕಲುಗಳನ್ನು ನೋಡಿ ಗುರುತಿಸಿದ ಮೇರೆಗೆ ಖರೀದಿ ಪತ್ರಗಳ ಧೃಡೀಕೃತ ನಕಲುಗಳನ್ನು ನಿಪಿ-31 ಮತ್ತು 32 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-31-ಎ ಮತ್ತು ನಿಪಿ-32-ಎ ಎಂದು ಗುರುತಿಸಲಾಯಿತು. ನಾನು ನಿಪಿ-31 ಮತ್ತು 32 ಕ್ಕೆ ಯಾವ ದಿನಾಂಕದಂದು ಸಹಿ ಮಾಡಿರುತ್ತೇನೆ ಎಂಬುದು ನನಗೆ ನೆನಪಿಲ್ಲ. ಸದರಿ ಖರೀದಿ ಪತ್ರವನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದಬು ನನಗೆ ಗೊತ್ತಿಲ್ಲ. ನಾನು ನೊಂದಣಾಧಿಕಾರಿಗಳ ಕಚೇರಿಗೆ ನನ್ನ ವೈಯಕ್ತಿಕ ಕೆಲಸಕ್ಕಾಗಿ ಹೋಗಿದ್ದಾಗ ಚಾಸಾ-9 ರವರು ನಿಪಿ-31 ಮತ್ತು 32 ಕ್ಕೆ ಸಹಿ ಮಾಡಲು ತಿಳಿಸಿದ ಮೇರೆಗೆ ಮಾಡಿರುತ್ತೇನೆ. ಈ ಪ್ರಕಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು)*

ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದ ;

ದಿಃ 04-06-2008 ರಂದು ನಾನು ನಮ್ಮೂರಿನ ಆರೋಪಿ ನಂ.7 ರವರು ಚಾಸಾ-4 ರವರ ಜಮೀನನ್ನು ಖರೀದಿ ಪಡೆಯುವ ಸಲುವಾಗಿ ನನ್ನನ್ನು ಹಾಗೂ ಚಾಸಾ-7 ರವರನ್ನು ಸಬ್ ರೆಜಿಸ್ಟರ ಕಚೇರಿಗೆ ಕರೆದುಕೊಂಡು ಬಂದಿದ್ದ ಎಂದರೆ ಸರಿಯಲ್ಲ. ಆರೋಪಿ 7 ರವರು ಸದರಿ ನಿಪಿ-31 ಮತ್ತು 32 ರ ಖರೀದಿ ಪತ್ರಗಳನ್ನು ರೆಡಿ ಮಾಡಿಸಿದ್ದನು ಎಂದರೆ ಸರಿಯಲ್ಲ. ಸದರಿ ನಿಪಿ-31 ಮತ್ತು 32 ಕ್ಕೆ ನಾನು 31-ಎ ಮತ್ತು 32-ಎ ರಂತೆ ಸಹಿ ಮಾಡಿರುತ್ತೇನೆ ಎಂದರೆ ಬಂಡ ರೈಟರ್ ಸಹಿ ಮಾಡಲು ತಿಳಿಸಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ. ಕೆಲವು ದಿನಗಳ ನಂತರ ಚಾಸಾ-1 ಮತ್ತು 4 ರವರಂತೆ ಆರೋಪಿ ನಂ.1 ಮತ್ತು 2 ರವರು ವರ್ತನೆ ಮಾಡಿ ನಿಪಿ-31 ಮತ್ತು 32 ರಂತೆ ದಾಖಲೆ ಸೃಷ್ಟಿಮಾಡಿಕೊಂಡಿರುವುದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಆರೋಪಿ ನಂ.3 ರಿಂದ 5 ರವರು ಸಹ ನಿಪಿ-31 ಮತ್ತು 32 ಕ್ಕೆ ಸಹಿಗಳನ್ನು ಮಾಡಿದ ವಿಷಯ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಆರೋಪಿ ನಂ.8 ಮತ್ತು 10 ರವರು ನಿಪಿ-31 ಮತ್ತು 32 ಕ್ಕೆ ಗುರುತು ಬಲ್ಲವರು ಎಂದು ಸಹಿಗಳನ್ನು ಮಾಡಿದ ವಿಷಯ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಆರೋಪಿ ನಂ.9 ರವರಿಗೆ ಚಾಸಾ-1 ಮತ್ತು 4 ರವರ ಜಮೀನು ಇರುವ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿ ನಂ.6 ಮತ್ತು 7 ರವರಿಗೆ ಖೊಟ್ಟಿ ಖರೀದಿ ಕರಾರು ಮಾಡಿಕೊಂಟ್ಟಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 4 ರವರಿಗೆ ಆರೋಪಿತರೆಲ್ಲರೂ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂಗತಿ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ.

ಆ ಕುರಿತು ನಾನು ದಿಃ 26-06-2010 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಮಾನ್ಯ ಸ.ಸ.ಅ ರವರು ಸಾಕ್ಷಿಗೆ ಓದಿ ಹೇಳಿದ್ದು ಸಾಕ್ಷಿಯು ಅದನ್ನು ಅಲ್ಲಗಳೆದ ಮೇರೆಗೆ ನಿಪಿ-33 ಎಂದು ಗುರುತಿಸಲಾಯಿತು. ಈಗ ಆರೋಪಿತರಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರವರಿಂದಃ ಇಲ್ಲ</u>

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ.,ಗೋಕಾಕ.